ಕರ್ನಾಟಕಸರ್ಕಾರ

ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ: ಡಿಟಿಇ 02 ಇಎಸ್‌ಟಿ(10) 2025

ಆಯುಕ್ತರ ಕಛೇರಿ,
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ,
ಅರಮನೆ ರಸ್ತೆ, ಬೆಂಗಳೂರು-560 001.
ದಿನಾಂಕ: 20-05-2025

## ಪರಿಚಲನಾದೇಶ

ವಿಷಯ: ಸರ್ಕಾರಿ ಪಾಲಿಟೆಕ್ನಿಕ್‌ಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಆಯ್ಕೆಶ್ರೇಣಿ ಉಪನ್ಯಾಸಕರುಗಳಿಗೆ ಕರಿಯರ್ ಅಡ್ವಾನ್ಸ್‌ಮೆಂಟ್ ಯೋಜನೆಯಡಿ ವೃತ್ತಿ ಪದೋನ್ನತಿ ನೀಡುವ ಬಗ್ಗೆ.

ಉಲ್ಲೇಖ: ಸರ್ಕಾರದ ಆದೇಶ ಸಂಖ್ಯೆ: ಇಡಿ 52 ಡಿಟಿಇ 2025 ದಿನಾಂಕ:12-05-2025

******

ಉಲ್ಲೇಖದ ಆದೇಶದ ಅನುಬಂಧದಲ್ಲಿ ಹೆಸರಿಸಲಾದ ಸರ್ಕಾರಿ ಪಾಲಿಟೆಕ್ನಿಕ್‌ಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಆಯ್ಕೆಶ್ರೇಣಿ ಉಪನ್ಯಾಸಕರುಗಳಿಗೆ ಕರಿಯರ್ ಅಡ್ವಾನ್ಸ್‌ಮೆಂಟ್ ಯೋಜನೆಯಡಿ 6ನೇ ಎ ಐ ಸಿ ಟಿ ಇ ವೇತನಶ್ರೇಣಿ ರೂ. 15600-39100 + ಎ ಜಿ ಪಿ ರೂ.8000 ರಿಂದ ವೇತನಶ್ರೇಣಿ ರೂ. 37400-67000 + ಎ ಜಿ ಪಿ ರೂ. 9000 ಕ್ಕೆ ವೃತ್ತಿ ಪದೋನ್ನತಿ ನೀಡಿರುವ ಸರ್ಕಾರದ ಆದೇಶವನ್ನು ಸಂಬಂಧಪಟ್ಟ ಆಯ್ಕೆಶ್ರೇಣಿ ಉಪನ್ಯಾಸಕರುಗಳಿಗೆ ಹಾಗೂ ಸಂಬಂಧಪಟ್ಟ ಪ್ರಾಂಶುಪಾಲರಿಗೆ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ ಪರಿಚಯಿಸಲಾಗಿದೆ..

Digitally signed by
Prasanna H
Date: 28-05-2025
12:39:44

ನಿರ್ದೇಶಕರು
ತಾಂತ್ರಿಕ ಶಿಕ್ಷಣ ಇಲಾಖೆ,

ಇವರಿಗೆ:-

1. ಸಂಬಂಧಪಟ್ಟ ಪ್ರಾಂಶುಪಾಲರುಗಳಿಗೆ - ಮಾಹಿತಿ ಹಾಗೂ ಮುಂದಿನ ಕ್ರಮಕ್ಕಾಗಿ;
2. ಸಂಬಂಧಪಟ್ಟ ಆಯ್ಕೆಶ್ರೇಣಿ ಉಪನ್ಯಾಸಕರುಗಳ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ (ಪ್ರಾಂಶುಪಾಲರ ಮುಖಾಂತರ)
3. ನೋಡಲ್ ಅಧಿಕಾರಿ, ಇ-ಆಡಳಿತ, ಆಯುಕ್ತರ ಕಛೇರಿ, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು (ವೆಬ್‌ಸೈಟ್‌ನಲ್ಲಿ ಅಳವಡಿಸಲು)

ಪ್ರತಿ:-

1. ಮಹಾಲೇಖಪಾಲರು, ಎ&ಇ, ಬೆಂಗಳೂರು;
2. ಮಹಾಲೇಖಪಾಲರು, ಎ&ಇ, (AAOGE-XI) ಬೆಂಗಳೂರು;
3. ಸರ್ಕಾರದ ಅಧೀನ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ(ತಾಂತ್ರಿಕ), ಬಹುಮಹಡಿ ಕಟ್ಟಡ, ಬೆಂಗಳೂರು;
4. ಆಪ್ತ ಶಾಖೆ, ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು;
5. ಆಪ್ತ ಶಾಖೆ, ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು;
6. ಹೆಚ್ಚುವರಿ ಪ್ರತಿ ಕಡತಕ್ಕೆ

1009446/25

# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಸರ್ಕಾರಿ ಪಾಲಿಟೆಕ್ನಿಕ್‌ಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಆಯ್ಕೆ ಶ್ರೇಣಿ ಉಪನ್ಯಾಸಕರುಗಳಿಗೆ ಕೆರಿಯರ್ ಅಡ್ವಾನ್ಸ್ ಮೆಂಟ್ ಯೋಜನೆಯಡಿ ವೃತ್ತಿ ಪದೋನ್ನತಿ ನೀಡುವ ಬಗ್ಗೆ.

**ಓದಲಾಗಿದೆ:-**
1. ಎಐಸಿಟಿಇ ಅಧಿಸೂಚನೆ (Pay Scales-Diploma) ಸಂಖ್ಯೆ:F.No.37-3/Legal/2010,ದಿನಾಂಕ:05-03-2010
2. ಸರ್ಕಾರದ ಆದೇಶ ಸಂಖ್ಯೆ: ಇಡಿ 118 ಡಿಟಿಇ 2010, ದಿನಾಂಕ:31.03.2011.
3. ಎಐಸಿಟಿಇ ಅಧಿಸೂಚನೆ [CAS Regulation - 2012 (Diploma)] ಸಂಖ್ಯೆ:F.No.37-3/ Legal/AICTE/2012, ದಿನಾಂಕ:08-11-2012
4. ಎಐಸಿಟಿಇ ಅಧಿಸೂಚನೆ [Clarifications (Diploma/Degree] ಸಂಖ್ಯೆ:F.No.27/ RIFD/ Pay Scale/01/2013-14 ದಿನಾಂಕ: 04-01-2016.
5. ಎಐಸಿಟಿಇ ಅಧಿಸೂಚನೆ ಸಂಖ್ಯೆ: F.No. 27-4/AICTE/RIFD/Pay Scale/2018-19, 20.05.2020.
6. ಸರ್ಕಾರದ ಆದೇಶ ಸಂಖ್ಯೆ:ಇಡಿ 167 ಡಿಟಿಇ 2017, ದಿನಾಂಕ: 10.11.2020.
7. ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ ರವರ ಏಕ ಕಡತ ಸಂಖ್ಯೆ:DTE-ADMI0EST(10)/2/2025 (E-1640265).

D.I/EST-10
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಆಯುಕ್ತರ ಆಪ್ತ ಶಾಖೆ.
ಸಂಖ್ಯೆ 150
ದಿನಾಂಕ 14 MAY 2025
ತಾಂತ್ರಿಕ ಶಿಕ್ಷಣ ಇಲಾಖೆ ನಿರ್ದೇಶಕರ ಆಪ್ತ ಶಾಖೆ
ಸಂಖ್ಯೆ 137
ದಿನಾಂಕ 21/5/25

**ಪ್ರಸ್ತಾವನೆ:-**

ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ಎಐಸಿಟಿಇ, ನವದೆಹಲಿ ರವರ ಅಧಿಸೂಚನೆಯಲ್ಲಿ ತಾಂತ್ರಿಕ ಶಿಕ್ಷಣ ಇಲಾಖೆಯಲ್ಲಿ ಬರುವ ಎಲ್ಲಾ ಸರ್ಕಾರಿ/ಅನುದಾನಿತ ಪಾಲಿಟೆಕ್ನಿಕ್ ಕಾಲೇಜಗಳಲ್ಲಿನ ಬೋಧಕ ಸಿಬ್ಬಂದಿಗಳಿಗೆ 6ನೇ ಪರಿಷ್ಕೃತ ಎಐಸಿಟಿಇ ವೇತನ ಶ್ರೇಣಿಗಳು, ವಿದ್ಯಾರ್ಹತೆ, ಕೆರಿಯರ್ ಅಡ್ವಾನ್ಸ್‌ಮೆಂಟ್ ಯೋಜನೆ ಸೌಲಭ್ಯಗಳು ಮತ್ತು ಇತರೆ ಸೇವಾ ಸೌಲಭ್ಯಗಳನ್ನು ವಿಸ್ತರಿಸಲು ಅವಕಾಶ ಕಲ್ಪಿಸಲಾಗಿದೆ.

ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ಆದೇಶದಲ್ಲಿ ಸರ್ಕಾರಿ ಪಾಲಿಟೆಕ್ನಿಕ್‌ಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಬೋಧಕರುಗಳಿಗೆ 6ನೇ ಎಐಸಿಟಿಇ ವೇತನ ಶ್ರೇಣಿಗಳನ್ನು ದಿನಾಂಕ:01.04.2011 ರಿಂದ ಅನ್ವಯಿಸುವಂತೆ ವಿಸ್ತರಿಸಿ ಆದೇಶಿಸಲಾಗಿದೆ.

ಮೇಲೆ ಕ್ರಮ ಸಂಖ್ಯೆ (3)ರಲ್ಲಿ ಓದಲಾದ ಎಐಸಿಟಿಇ, ನವದೆಹಲಿರವರ ಅಧಿಸೂಚನೆಯಲ್ಲಿ, ಎಐಸಿಟಿಇ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಸರ್ಕಾರಿ/ಅನುದಾನಿತ ಪಾಲಿಟೆಕ್ನಿಕ್ (ಡಿಪ್ಲೊಮಾ) ಸಂಸ್ಥೆಗಳಲ್ಲಿ ಎಐಸಿಟಿಇ ವೇತನ ಶ್ರೇಣಿಯೊಂದಿಗೆ ಕಾರ್ಯನಿರ್ವಹಿಸುತ್ತಿರುವ ಬೋಧಕ ಸಿಬ್ಬಂದಿ/ ಉಪನ್ಯಾಸಕರುಗಳಿಗೆ 'ಕೆರಿಯರ್ ಅಡ್ವಾನ್ಸ್‌ಮೆಂಟ್ ಸೌಲಭ್ಯ'ಗಳ ಮಂಜೂರಾತಿ ಕುರಿತಂತೆ "All India Council for Technical Education (Career Advancement Scheme for the Teachers and other Academic Staff in Technical Institutions) (Diploma) Regulations, 2012"ನ್ನು ದಿನಾಂಕ:08-11-2012 ರಿಂದ ಜಾರಿಗೊಳಿಸಲು ನಿಯಮಗಳನ್ನು ರೂಪಿಸಲಾಗಿರುತ್ತದೆ.

ಮೇಲೆ ಕ್ರಮ ಸಂಖ್ಯೆ (4)ರಲ್ಲಿ ಓದಲಾದ ಎಐಸಿಟಿಇ, ನವದೆಹಲಿರವರು ಹೊರಡಿಸಿರುವ ಅಧಿಸೂಚನೆ "All India Council for Technical Education (Career Advancement scheme for the teachers and other academic staff in technical institutions) (Diploma) Regulations 2012" ರಲ್ಲಿ

ಕೆಲವೊಂದು ಅಂಶಗಳ ಬಗ್ಗೆ ಸ್ಪಷ್ಟೀಕರಣ ನೀಡಿದ್ದು, ಸದರಿ ಅಧಿಸೂಚನೆಯ ಕ್ರಮ ಸಂಖ್ಯೆ:38ರಲ್ಲಿ ಪಾಲಿಟೆಕ್ನಿಕ್ ಕಾಲೇಜುಗಳ ಬೋಧಕ ಸಿಬ್ಬಂದಿಗಳಿಗೆ ಸಿ.ಎ.ಎಸ್ ಯೋಜನೆಯಡಿ ವೃತ್ತಿ ಪದೋನ್ನತಿ ಸೌಲಭ್ಯವನ್ನು ಮಂಜೂರು ಮಾಡುವಲ್ಲಿ ಎ.ಪಿ.ಐ ಸ್ಕೋರ್‌ನಿಂದ ದಿನಾಂಕ:07.11.2015ರವರೆಗೆ ವಿನಾಯಿತಿ ನೀಡಲಾಗಿರುತ್ತದೆ. ಇದನ್ನು ಎಐಸಿಟಿಇ ಅಧೀನದಲ್ಲಿ ಬರುವ ಎಲ್ಲಾ ತಾಂತ್ರಿಕ ಶಿಕ್ಷಣ ಸಂಸ್ಥೆಗಳಿಗೆ ಅನ್ವಯಿಸಲು ಸದರಿ ಅಧಿಸೂಚನೆಯಲ್ಲಿ ತಿಳಿಸಲಾಗಿರುತ್ತದೆ.

ಮೇಲೆ ಕ್ರಮ ಸಂಖ್ಯೆ (5)ರಲ್ಲಿ ಓದಲಾದ ಎಐಸಿಟಿಇ, ಅಧಿಸೂಚನೆಯಲ್ಲಿ ತಾಂತ್ರಿಕ ವಿದ್ಯಾಸಂಸ್ಥೆಗಳ (ಡಿಪ್ಲೊಮಾ/ಪದವಿ) ಅಧ್ಯಾಪಕರು ಹಾಗೂ ಇತರ ಅಕಾಡೆಮಿಕ್ ಸಿಬ್ಬಂದಿಗಳ ವಿದ್ಯಾರ್ಹತೆ, ವೇತನ ಶ್ರೇಣಿಗಳು, ಸೇವಾ ಷರತ್ತುಗಳು, ಕೆರಿಯರ್ ಅಡ್ವಾನ್ಸ್‌ಮೆಂಟ್ ಯೋಜನೆಗಳು (CAS)/ಪದೋನ್ನತಿ ಮೊದಲಾದವುಗಳಿಗೆ ಸಂಬಂಧಿಸಿದಂತೆ 6ನೇ ವೇತನ ಆಯೋಗದಲ್ಲಿ ಉಂಟಾದ ಕೆಲವು ಗೊಂದಲಗಳ ಬಗ್ಗೆ ಸ್ಪಷ್ಟೀಕರಣ ನೀಡಲಾಗಿದೆ.

ಮೇಲೆ ಕ್ರಮ ಸಂಖ್ಯೆ (6)ರಲ್ಲಿ ಓದಲಾದ ಆದೇಶದಲ್ಲಿ ಸರ್ಕಾರಿ/ಖಾಸಗಿ ಅನುದಾನಿತ ಪಾಲಿಟೆಕ್ನಿಕ್ ಕಾಲೇಜುಗಳಲ್ಲಿನ ಬೋಧಕ ಸಿಬ್ಬಂದಿಗಳಿಗೆ ಸಿ.ಎ.ಎಸ್ ಯೋಜನೆ ಆಧಾರಿತ ವೃತ್ತಿ ಪದೋನ್ನತಿ (CAS) ಸೌಲಭ್ಯಗಳನ್ನು ಅನುಷ್ಠಾನಗೊಳಿಸಲು ಮಾರ್ಗಸೂಚಿಯನ್ನು ಹೊರಡಿಸಲಾಗಿದೆ.

ಮೇಲೆ ಕ್ರಮ ಸಂಖ್ಯೆ (7)ರಲ್ಲಿ ಓದಲಾದ ಆಯುಕ್ತಾಲಯದ ಏಕ ಕಡತದ ಪ್ರಸ್ತಾವನೆಯಲ್ಲಿ ಸರ್ಕಾರಿ ಪಾಲಿಟೆಕ್ನಿಕ್‌ಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಕೆಳಕಂಡ ಆಯ್ಕೆ ಶ್ರೇಣಿ ಉಪನ್ಯಾಸಕರಿಗೆ ಕೆರಿಯರ್ ಅಡ್ವಾನ್ಸ್‌ಮೆಂಟ್ ಯೋಜನೆಯಡಿ (CAS), 6ನೇ ಎಐಸಿಟಿಇ ವೇತನ ಶ್ರೇಣಿ ರೂ.15600-39100+ಎಜಿಪಿ ರೂ.8000/- ರಿಂದ ವೇತನ ಶ್ರೇಣಿ ರೂ.37400-67000+ಎಜಿಪಿ ರೂ.9000/-ಕ್ಕೆ ವೃತ್ತಿ ಪದೋನ್ನತಿ ಸೌಲಭ್ಯವನ್ನು ಮಂಜೂರು ಮಾಡುವ ಸಲುವಾಗಿ ತಾಂತ್ರಿಕ ಶಿಕ್ಷಣ ನಿರ್ದೇಶಕರ ಅಧ್ಯಕ್ಷತೆಯಲ್ಲಿ ಸ್ಥಾನೀಕರಣ ಸಮಿತಿಯನ್ನು ರಚಿಸಲಾಗಿತ್ತು. ದಿನಾಂಕ 02-01-2025 ರಿಂದ 05-02-2025 ಮತ್ತು 20-01-2025 ರಿಂದ 27-01-2025ರ ಅವಧಿಯಲ್ಲಿ ನಡೆಯಲಾದ ಸ್ಥಾನೀಕರಣ ಹಾಗೂ ಸ್ಕ್ರೀನಿಂಗ್ ಸಮಿತಿಗಳು, ಆಯ್ಕೆ ಶ್ರೇಣಿಯ ಉಪನ್ಯಾಸಕರ ವಿದ್ಯಾರ್ಹತೆ, ಸೇವಾನುಭವ, ಅಲ್ಪಾವಧಿ ತರಬೇತಿ, ಎಪಿಐ ಅಂಕಗಳು ಮತ್ತು ಎಐಸಿಟಿಇ ಕಾಲಕಾಲಕ್ಕೆ ನಿಗದಿಪಡಿಸಿರುವ ಇತರ ಎಲ್ಲಾ ಮಾನದಂಡಗಳನ್ನು ಪರಿಶೀಲಿಸಿ, ಅರ್ಹ 07 ಉಪನ್ಯಾಸಕರಿಗೆ ವೃತ್ತಿ ಪದೋನ್ನತಿ ಮಂಜೂರು ಮಾಡಲು ಶಿಫಾರಸ್ಸು ಮಾಡಿರುತ್ತದೆ. ಅದನ್ನು ಆಧರಿಸಿ, ಸದರಿ ಬೋಧಕರುಗಳಿಗೆ ವೃತ್ತಿ ಪದೋನ್ನತಿ ಮಂಜೂರು ಮಾಡುವ ಬಗ್ಗೆ ಸೂಕ್ತ ಆದೇಶ ಹೊರಡಿಸುವಂತೆ ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ ರವರು ಕೋರಿರುತ್ತಾರೆ.

1. ಸುರೇಖಾ, ಆಯ್ಕೆ ಶ್ರೇಣಿ ಉಪನ್ಯಾಸಕರು, ಸರ್ಕಾರಿ ಪಾಲಿಟೆಕ್ನಿಕ್, ಬೀದರ್.
2. ಹೆಚ್.ಟಿ. ಅಮರನಾಥ್., ಆಯ್ಕೆ ಶ್ರೇಣಿ ಉಪನ್ಯಾಸಕರು, ಸರ್ಕಾರಿ ಪಾಲಿಟೆಕ್ನಿಕ್, ಗೌರಿಬಿದನೂರು.
3. ಮಹ್ಮದ್ ಅಸಿಫ್ , ಆಯ್ಕೆ ಶ್ರೇಣಿ ಉಪನ್ಯಾಸಕರು, ಸರ್ಕಾರಿ ಪಾಲಿಟೆಕ್ನಿಕ್, ರಾಯಚೂರು.
4. ಸುನಿಲ್‌ಕುಮಾರ್ ಎಸ್ ಬಡಿಗೇರ್, ಆಯ್ಕೆ ಶ್ರೇಣಿ ಉಪನ್ಯಾಸಕರು, ಸರ್ಕಾರಿ ಪಾಲಿಟೆಕ್ನಿಕ್, ಮುಧೋಳ.
5. ಸಂಜೀವಕುಮಾರ್ ಡಿ., ಆಯ್ಕೆ ಶ್ರೇಣಿ ಉಪನ್ಯಾಸಕರು, ಸರ್ಕಾರಿ ಪಾಲಿಟೆಕ್ನಿಕ್, ಔರಾದ್.
6. ಡಾ.ಮಾದೇಗೌಡ ಬಿ, ಆಯ್ಕೆ ಶ್ರೇಣಿ ಉಪನ್ಯಾಸಕರು, ಸರ್ಕಾರಿ ಪಾಲಿಟೆಕ್ನಿಕ್,ತುಮಕೂರು.
7. ನಿಜಾನಂದ ರೆಡ್ಡಿ, ಉಪನ್ಯಾಸಕರು, ಸರ್ಕಾರಿ ಪಾಲಿಟೆಕ್ನಿಕ್, ರಾಯಚೂರು.

ಸರ್ಕಾರದ ಆದೇಶ ಸಂಖ್ಯೆ:ಇಡಿ 118 ಡಿಟಿಇ 2010, ದಿನಾಂಕ:31.03.2011ರ Appendix-II (xii)ರಲ್ಲಿ, AGP Rs.9000ಕ್ಕೆ ಅರ್ಹತೆ ಹೊಂದಲು ಈ ಕೆಳಕಂಡಂತೆ ತಿಳಿಸಲಾಗಿದೆ.

Lecturers (Selection Grade), completing 3 years of teaching with the AGP of Rs.8000 shall be eligible, subject to other conditions, as may b prescribed by AICTE, to move to the Pay Band of Rs.37400-67000 with AGP of Rs.9000.

ಹಾಗೂ ಎಐಸಿಟಿಇ ಕಾಲಕಾಲಕ್ಕೆ ನಿಗದಿಪಡಿಸಿರುವ ಇತರ ಅರ್ಹತಾ ಮಾನದಂಡಗಳನ್ನು ಪೂರೈಸಿರುವ ಪಾಲಿಟೆಕ್ನಿಕ್‌ಗಳ ಉಪನ್ಯಾಸಕರುಗಳಿಗೆ ಕೆರಿಯರ್ ಅಡ್ವಾನ್ಸ್ ಮೆಂಟ್ ಯೋಜನೆಯಡಿ (CAS) ವೃತ್ತಿಪದೋನ್ನತಿ ನೀಡಲು ಅವಕಾಶ ಕಲ್ಪಿಸಲಾಗಿದೆ.

ಶ್ರೀಮತಿ ಸುರೇಖಾ, ಆಯ್ಕೆ ಶ್ರೇಣಿ ಉಪನ್ಯಾಸಕರು, ಸರ್ಕಾರಿ ಪಾಲಿಟೆಕ್ನಿಕ್, ಬೀದರ್ ದಿನಾಂಕ: 30.04.2013 ರಂದು AGP ರೂ.8000ಕ್ಕೆ ಅರ್ಹರಾಗಿದ್ದು, ಮೂರು ವರ್ಷಗಳ ಸೇವಾ ಅವಧಿ ಪರಿಗಣಿಸಿದರೆ, ಅವರು 30.04.2016 ರಂದು AGP ರೂ.9000 ಗೆ ಅರ್ಹರಾಗುತ್ತಾರೆ. ಆದರೆ, ಸ್ಥಾನೀಕರಣ ಸಮಿತಿಯ ನಡವಳಿಯಲ್ಲಿ ಅವರ ಅರ್ಹತಾ ದಿನಾಂಕವನ್ನು ತಪ್ಪಾಗಿ 30.04.2019 ಎಂದು ನಮೂದಿಸಲಾಗಿದೆ.

ಅದೇ ರೀತಿ, ಶ್ರೀ ಹೆಚ್.ಟಿ. ಅಮರನಾಥ್., ಆಯ್ಕೆ ಶ್ರೇಣಿ ಉಪನ್ಯಾಸಕರು, ಸರ್ಕಾರಿ ಪಾಲಿಟೆಕ್ನಿಕ್, ಗೌರಿಬಿದನೂರು ದಿನಾಂ: 25.02.2015 ರಂದು AGP ರೂ.8000 ಗೆ ಅರ್ಹರಾಗಿದ್ದು, ಈ ಆಧಾರದ ಮೇಲೆ 25.02.2018 ರಂದು AGP ರೂ.9000 ಕ್ಕೆ ಅರ್ಹರಾಗುತ್ತಾರೆ. ಆದರೆ, ಅವರ ಅರ್ಹತಾ ದಿನಾಂಕವನ್ನು ಸಮಿತಿಯು ತಪ್ಪಾಗಿ 21.04.2017 ಎಂದು ದಾಖಲಿಸಿರುತ್ತದೆ.

ಹೀಗಾಗಿ, ಈ ಇಬ್ಬರು ಆಯ್ಕೆ ಶ್ರೇಣಿ ಉಪನ್ಯಾಸಕರ ಅರ್ಹತಾ ದಿನಾಂಕಗಳ ಬಗ್ಗೆ ಮರುಪರಿಶೀಲನೆ ಮಾಡುವ ಅಗತ್ಯವಿದೆ.

ಉಳಿದಂತೆ, 05 ಆಯ್ಕೆ ಶ್ರೇಣಿ ಉಪನ್ಯಾಸಕರುಗಳು 6ನೇ ಎಐಸಿಟಿಇ ವೇತನ ಶ್ರೇಣಿ ರೂ.15600-39100 + ಎಜಿಪಿ ರೂ.8000/-ರಲ್ಲಿ 3 ವರ್ಷಗಳ ಸೇವೆಯನ್ನು ಹಾಗೂ ಎಐಸಿಟಿಇ ಕಾಲಕಾಲಕ್ಕೆ ನಿಗದಿಪಡಿಸಿರುವ ಇತರ ಅರ್ಹತಾ ಮಾನದಂಡಗಳನ್ನು ಪೂರೈಸಿರುವ ಬಗ್ಗೆ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಸ್ಥಾನೀಕರಣ ಸಮಿತಿಯು ಹಾಗೂ ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆರವರು ಮಾಡಿರುವ ಶಿಫಾರಸ್ಸನ್ನು ಪರಿಗಣಿಸಿ, ಸದರಿ ಉಪನ್ಯಾಸಕರುಗಳಿಗೆ ಕೆರಿಯರ್ ಅಡ್ವಾನ್ಸ್ ಮೆಂಟ್ ಯೋಜನೆಯಡಿ (CAS), 6ನೇ ಎಐಸಿಟಿಇ ವೇತನ ಶ್ರೇಣಿ ರೂ.15600-39100+ಎಜಿಪಿ ರೂ.8000/- ರಿಂದ ವೇತನ ಶ್ರೇಣಿ ರೂ.37400-67000+ಎಜಿಪಿ ರೂ.9000/-ಕ್ಕೆ ವೃತ್ತಿ ಪದೋನ್ನತಿ ಸೌಲಭ್ಯವನ್ನು ಮಂಜೂರು ಮಾಡಲು ತೀರ್ಮಾನಿಸಲಾಗಿದೆ. ಅದರಂತೆ, ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ:ಇಡಿ 52 ಡಿಟಿಇ 2025**

**ಬೆಂಗಳೂರು, ದಿನಾಂಕ: 12ನೇ ಮೇ 2025**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ಸರ್ಕಾರಿ ಪಾಲಿಟೆಕ್ನಿಕ್‌ಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಈ ಆದೇಶದ **ಅನುಬಂಧ**ದಲ್ಲಿರುವ 05 ಆಯ್ಕೆ ಶ್ರೇಣಿ ಉಪನ್ಯಾಸಕರುಗಳಿಗೆ ಕೆರಿಯರ್ ಅಡ್ವಾನ್ಸ್‌ಮೆಂಟ್ ಯೋಜನೆ (CAS)ಯಡಿ 6ನೇ ಎಐಸಿಟಿಇ ವೇತನ ಶ್ರೇಣಿ ರೂ.15600-39100 + ಎಜಿಪಿ ರೂ.8000/- ರಿಂದ ವೇತನ ಶ್ರೇಣಿ ರೂ.37400-67000+ ಎಜಿಪಿ ರೂ.9000/-ಕ್ಕೆ ಅರ್ಹತಾ ದಿನಾಂಕದಿಂದ ವೃತ್ತಿ ಪದೋನ್ನತಿ ನೀಡಿ, ಆರ್ಥಿಕ ಸೌಲಭ್ಯವನ್ನು ಈ ಆದೇಶ ಹೊರಡಿಸಿದ ದಿನಾಂಕದಿಂದ ಅನ್ವಯವಾಗುವಂತೆ ಮಂಜೂರು ಮಾಡಿ ಆದೇಶಿಸಿದೆ.

**ಷರತ್ತುಗಳು:**

1. 2010 ಮತ್ತು 2012ರ ಎಐಸಿಟಿಇ ರೆಗ್ಯುಲೇಷನ್‌ಗಳನ್ವಯ ಎ.ಜಿ.ಪಿ ಮಂಜೂರಾತಿಯು ಸರ್ಕಾರದ ಮಾರ್ಗಸೂಚಿ/ ಆದೇಶಗಳಲ್ಲಿನ ನಿಬಂಧನೆಗೊಳಪಟ್ಟಿರುತ್ತದೆ.

2. ಎ.ಜಿ.ಪಿ ಮಂಜೂರಾತಿಯು ಎಐಸಿಟಿಇ/ಯುಜಿಸಿ/ಸರ್ಕಾರ/ಇಲಾಖೆ ಕಾಲಕಾಲಕ್ಕೆ ಹೊರಡಿಸಿರುವ ಆದೇಶ/ ಸುತ್ತೋಲೆ/ ಪತ್ರಗಳಲ್ಲಿ ನಿಗದಿಪಡಿಸಿರುವ ಷರತ್ತು/ನಿಬಂಧನೆಗಳಿಗೆ ಒಳಪಟ್ಟಿರುತ್ತದೆ.

3. ಸದರಿಯವರು ಸಿಎಎಸ್ ಮುಂಬಡ್ತಿಗೆ ಎಲ್ಲಾ ರೀತಿಯಲ್ಲೂ ಅರ್ಹತೆಯನ್ನು ಹೊಂದಿರುವ ಬಗ್ಗೆ ಸ್ಥಾನೀಕರಣ ಆಯ್ಕೆ ಸಮಿತಿಯು ಮಾಡಿರುವ ಶಿಫಾರಸ್ಸಿನಂತೆ ಪರಿಗಣಿಸಲಾಗಿದೆ.

4. ವೃತ್ತಿ ಪದೋನ್ನತಿಯ ಆರ್ಥಿಕ ಸೌಲಭ್ಯವನ್ನು ಭವಿಷ್ಯವರ್ತಿಯಾಗಿ ಅಂದರೆ, ಈ ಆದೇಶ ಹೊರಡಿಸಿದ ದಿನಾಂಕದಿಂದ ಜಾರಿಗೊಳಿಸುವುದು.

5. ಸದರಿಯವರಿಗೆ ವೇತನ ಶ್ರೇಣಿಯನ್ನು 7ನೇ ಎಐಸಿಟಿಇ ಪರಿಷ್ಕೃತ ವೇತನ ಶ್ರೇಣಿಯಡಿ ಸಂವಾದಿಯಾಗಿ ನಿಗದಿಪಡಿಸುವುದು.

6. ಸದರಿಯವರ ಪ್ರಸ್ತಾವನೆಯಲ್ಲಿ ಯಾವುದೇ ತಪ್ಪು ಮಾಹಿತಿಯನ್ನು ಒದಗಿಸಿರುವುದು ಕಂಡು ಬಂದಲ್ಲಿ ಸದರಿಯವರುಗಳ ಎ.ಜಿ.ಪಿ ಮಂಜೂರಾತಿಯನ್ನು ಯಾವುದೇ ಮುನ್ಸೂಚನೆ ನೀಡದೇ ಹಿಂಪಡೆಯಲಾಗುವುದು ಹಾಗೂ ತಪ್ಪು ಮಾಹಿತಿ ಒದಗಿಸಿದವರ ವಿರುದ್ಧ ನಿಯಮಾನುಸಾರ ಕ್ರಮ ಜರುಗಿಸಲಾಗುವುದು.

7. ಈ ಆದೇಶದನ್ವಯ ಮಂಜೂರು ಮಾಡಲಾಗುವ ಎ.ಜಿ.ಪಿ. ಸೌಲಭ್ಯವನ್ನು ಸ್ಥಳೀಯ/ ಮಹಾಲೇಖಪಾಲರ ಲೆಕ್ಕಪರಿಶೋಧನೆಗೆ ಒಳಪಡಿಸಿದಾಗ ಯಾವುದೇ ಅಸಂಗತಗಳು ಕಂಡುಬಂದಲ್ಲಿ ಮರು ಪರಿಶೀಲಿಸುವ ಮತ್ತು ನಿಯಮಾನುಸಾರ ಸೂಕ್ತ ಕ್ರಮಕೈಗೊಳ್ಳುವ ಷರತ್ತಿಗೊಳಪಟ್ಟಿರುತ್ತದೆ.

8. ಎಜಿಪಿ ಮಂಜೂರಾತಿ ವಿವರಗಳನ್ನು ಸದರಿ ಬೋಧಕ ಸಿಬ್ಬಂದಿಗಳ ಸೇವಾ ಪುಸ್ತಕದಲ್ಲಿ ನಮೂದಿಸುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಎನ್.ಕುಮಾರ್)
ಸರ್ಕಾರದ ಉಪ ಕಾರ್ಯದರ್ಶಿ,
ಉನ್ನತ ಶಿಕ್ಷಣ ಇಲಾಖೆ
(ತಾಂತ್ರಿಕ ಶಿಕ್ಷಣ & ಯೋಜನ)

**ಇವರಿಗೆ:**

1. ಪ್ರಧಾನ ಮಹಾಲೇಖಪಾಲರು, ಕರ್ನಾಟಕ (ಎ&ಇ), ಬೆಂಗಳೂರು.
2. ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಅರಮನೆ ರಸ್ತೆ, ಬೆಂಗಳೂರು.
3. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಅರಮನೆ ರಸ್ತೆ, ಬೆಂಗಳೂರು.
4. ಸಂಬಂಧಪಟ್ಟ ಪ್ರಾಂಶುಪಾಲರು/ಉಪನ್ಯಾಸಕರುಗಳಿಗೆ (ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆರವರ ಕಛೇರಿಯ ಮೂಲಕ)

**ಪ್ರತಿ:**

1. ಮಾನ್ಯ ಉನ್ನತ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸ ಸೌಧ, ಬೆಂಗಳೂರು.
2. ಸರ್ಕಾರದ ಕಾರ್ಯದರ್ಶಿರವರ ಆಪ್ತ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
3. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.

## ಅನುಬಂಧ
## (ಸರ್ಕಾರದ ಆದೇಶ ಸಂಖ್ಯೆ:ಇಡಿ 52 ಡಿಟಿಇ 2025, ದಿನಾಂಕ:12.05.2025)

| ಕ್ರ. ಸಂ | ಹೆಸರು, ಪದನಾಮ ಮತ್ತು ಕಾರ್ಯನಿರ್ವಹಿಸುತ್ತಿರುವ ಸಂಸ್ಥೆ ಶ್ರೀ/ಶ್ರೀಮತಿ | ಸೇವೆಗೆ ಸೇರಿದ ದಿನಾಂಕ | ವೇತನ ಶ್ರೇಣಿ ರೂ.15600-39100 + ಎಜಿಪಿ ರೂ.8000 ಮಂಜೂರಾದ ದಿನಾಂಕ | ರೂ. 9000 ಎಜಿಪಿಗೆ ಅರ್ಹರಾಗಲು ವಿದ್ಯಾರ್ಹತೆ ಮತ್ತು ಎಲ್ಲಾ ಮಾನದಂಡಗಳನ್ನು ಪೂರೈಸಿದ ದಿನಾಂಕ | ಎ.ಜಿ.ಪಿ 9000ಕ್ಕೆ ಅರ್ಹತಾ ದಿನಾಂಕ |
|---|---|---|---|---|---|
| ಮೆಕ್ಯಾನಿಕಲ್ ವಿಭಾಗ | | | | | |
| 1. | ಮಹ್ಮದ್ ಆಸೀಫ್ ಆಯ್ಕೆ ಶ್ರೇಣಿ ಉಪನ್ಯಾಸಕರು ಸರ್ಕಾರಿ ಪಾಲಿಟೆಕ್ನಿಕ್, ರಾಯಚೂರು | 08.04.2002 | 08.04.2013 | 07.04.2016 | 08.04.2016 |
| 2. | ನಿಜಾನಂದ ರೆಡ್ಡಿ ಆಯ್ಕೆ ಶ್ರೇಣಿ ಉಪನ್ಯಾಸಕರು, ಸರ್ಕಾರಿ ಪಾಲಿಟೆಕ್ನಿಕ್, ರಾಯಚೂರು. | 17.10.2005 | 17.10.2015 | 16.10.2018 | 17.102018 |
| ವಿಜ್ಞಾನ ವಿಭಾಗ | | | | | |
| 3. | ಸುನೀಲಕುಮಾರ ಎಸ್ ಬಡಿಗೇರ್, ಆಯ್ಕೆ ಶ್ರೇಣಿ ಉಪನ್ಯಾಸಕರು ಸರ್ಕಾರಿ ಪಾಲಿಟೆಕ್ನಿಕ್, ಮುದೋಳ | 29.11.2002 | 29.11.2013 | 28-11-2016 | 29.11.2016 |
| 4. | ಡಾ. ಸಂಜೀವಕುಮಾರ ಡಿ., ಆಯ್ಕೆ ಶ್ರೇಣಿ ಉಪನ್ಯಾಸಕರು ಸರ್ಕಾರಿ ಪಾಲಿಟೆಕ್ನಿಕ್, ಔರಾದ್ | 18.10.2005 | 18.10.2015 | 17.10.2018 | 18.10.2018 |
| ಆಟೋಮೊಬೈಲ್ ವಿಭಾಗ | | | | | |
| 5. | ಡಾ.ಮಾದೇಗೌಡ ಬಿ., ಆಯ್ಕೆ ಶ್ರೇಣಿ ಉಪನ್ಯಾಸಕರು ಸರ್ಕಾರಿ ಪಾಲಿಟೆಕ್ನಿಕ್, ತುಮಕೂರು | 24.10.2005 | 24.10.2015 | 23.10.2018 | 24.10.2018 |

(ಎನ್.ಕುಮಾರ್)
ಸರ್ಕಾರದ ಉಪ ಕಾರ್ಯದರ್ಶಿ,
ಉನ್ನತ ಶಿಕ್ಷಣ ಇಲಾಖೆ
(ತಾಂತ್ರಿಕ ಶಿಕ್ಷಣ & ಯೋಜನೆ)